ಪಟ್ಟಣ ಪತ್ರಿಕೆ, ತಾರೀಖು 12ನೆ ಜನವರಿ 1907.

1906ನೆ ಸನವು ಅಕ್ಟೋಬರು ತಿಂಗಳ ಪರಿಷತ್ತಿನ ಅಗ್ರಿಕಲ್ಚರಲ್ ಜರ್ನಲ್ ಅಥವಾ ವ್ಯವಸಾಯ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ, ಪೂಸಾವಿನಲ್ಲಿರುವ ವ್ಯವಸಾಯ ಸಂಬಂಧವಾದ ಅನ್ವೇಷಣಾಶಾಲೆಯ ರಾಸಾಯನಿಕವು ಮಿಸ ಶಾಸ್ತ್ರಜ್ಞರಾದ ಪಂಡಿತ ಇ. ಜೆ. ಬಟ್ಲರ್, ಎಂ. ಬಿ. ಎಫ್. ಎಲ್. ಎಸ್. ರವರ "ತೃಣದ್ರವ್ಯಗಳ (ಅಡಕೆ, ತೆಂಗು, ಮೊದಲಾದ ಮರಗಳ) ಕೆಲವು ರೋಗಗಳ" ವಿಷಯವಾದ ಉಪಾಖ್ಯಾನದಿಂದ ಏಳ್ತು ಬರದ ಈ ಕೆಳಗಣ ಕಂಡ ಕೊಳೆ ರೋಗದ ವಿವರಣೆಯನ್ನು ಸರ್ವ ಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿದೆ. ಇಷ್ಟವಿರುವವರು ಈ ವಿಷಯವನ್ನು ಚರ್ಚಿಸಬಹುದೆಂದು ಕೋರಿದೆ.

ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರದ ಜನರಲ್ ಮತ್ತು ರವಿನ್ಯೂ ಇಲಾಖೆಗಳ ಸೆಕ್ರಿಟರಿ.

ತೃಣದ್ರವ್ಯಗಳ ಕೆಲವು ರೋಗಗಳು.

ಪೂಸಾವಿನ ವ್ಯವಸಾಯ ಸಂಬಂಧವಾದ ಅನ್ವೇಷಣ ಶಾಲೆಯ ರಾಸಾಯನಿಕವು ಮಿಸ ಶಾಸ್ತ್ರಜ್ಞರಾದ

ಇ. ಜೆ. ಬಟ್ಲರ್, ಎಂ. ಬಿ. ಎಫ್. ಎಲ್. ಎಸ್ ರವರಿಂದ.

ಅಯನ ವೃತ್ತಗಳೊಳಗಿರುವ ದೇಶಗಳ ಎಂದರೆ ಉಷ್ಣ ದೇಶಗಳ ಜನಗಳಿಗೆ ತೃಣದ್ರವ್ಯಗಳಿಂದುಂಟಾಗುವ ಅಸಾಧಾರಣವಾದ ಪ್ರಯೋಜನವನ್ನು ನಾವು ಯೋಚಿಸಿದರೆ ತೃಣದ್ರವ್ಯಗಳಲ್ಲಿ ಮಿಸಿಯ (ನಾಯಿಕೊಡೆ ಬೂಜು ಮುಂತಾದುವು) ರೋಗಗಳು ಅಪರೂಪವಾಗಿರುವುದು ಭಾಗ್ಯವಾದ ವಿಷಯವಾಗಿದೆ. ಈಚಿನ ವರ್ಷಗಳಲ್ಲಿ ಇಂಡಿಯ ಎನಲ್ಲಿ ಕೆಲವು ರೋಗಗಳು ಕಾಣಿಸಿಕೊಂಡದ್ದರಲ್ಲಿ ಪ್ರತಿ ರೋಗವೂ ದೇಶದ ಒಂದೊಂದು ಭಾಗಕ್ಕೆ ಮಾತ್ರ ವ್ಯಾಪಿಸಿದಂತೆ ತೋರುತ್ತದೆ ಮತ್ತು ಅವು ಬೇರೆ ಬೇರೆ ಕಾರಣಗಳಿಂದ ಹುಟ್ಟಿದ್ದಾಗ್ಯೂ ಸಾಮಾನ್ಯವಾದ ಫಲಿತಾಂಶದಲ್ಲಿ ಏಕರೀತಿಯಾಗಿಯೇ ಇರ್ತವು.

ಅಡಕೆ ಮರಗಳ ಕೊಳೆ ರೋಗ.

ಮೈಸೂರು ಸೀಮೆಯ ಮಲೆನಾಡು ಜಿಲ್ಲೆಗಳಲ್ಲಿ ತತ್ಕಾಲ ಕೊಪ್ಪದ ಹತ್ತಿರ ಅಡಕೆ ಮರಗಳಿಗೆ ಬಂದು ರೋಗವು ಬರುವಂತೆ ಅನೇಕ ವರ್ಷಗಳಿಂದ ತಿಳಿದಿತ್ತು. ಆ ಸ್ಥಳಗಳಲ್ಲಿ ಜನರು ಅದನ್ನು "ಕೊಳೆ ರೋಗ" ಅಥವಾ ಕಪ್ಪುರೋಗ ವೆಂದು ಕರೆಯುತ್ತಾರೆ. ಇದ್ದುವರೆಗೆ ಅದು ಇನ್ನೆಲ್ಲಿಯೂ ಕಾಣಿಸಿಕೊಳ್ಳದೆಯೂ, ಮತ್ತು ಇರುವರೆಗೆ ನೋಡಿದ್ದರಲ್ಲಿ ಬಹಳವಾಗಿ ಹರಡಿಕೊಳ್ಳುವಂತೆ ತೋರದೆಯೂ ಇರುವುದರಿಂದ ಅದು ಹುಟ್ಟುವ ಸ್ಥಳದ ವಿಶೇಷವಾದ ವಾಯುವಿನ ಸ್ಥಿತಿಗಳು ಅದಕ್ಕೆ ಪ್ರಾಯಶಃ ಅನುಕೂಲವಾಗಿರಬಹುದು.

ರೋಗದ ಪ್ರಥಮ ಚಿನ್ಹೆಯು ಹೂವು ಬಿಡುವ ಕಾಲದಲ್ಲಿ ಕಾಣಿಸಿಕೊಳ್ಳುತ್ತದೆ. ಕಾಯಾಗದೆ ಕೆಲವು ಹೂವುಗಳು ಬಿದ್ದು ಹೋಗಿ ಅವುಗಳ ತೊಟ್ಟುಗಳು ಕಪ್ಪಾಗಿ ಕೊಳೆತಹೋಗುತ್ತವೆ. ಈ ರೋಗವು ಕ್ರಮವಾಗಿ ಹೂವುಗಳೆಲ್ಲಾ ವ್ಯಾಪಿಸಿ ಅಡಕೆ ಕಾಯಿ ಆಗುತ್ತಿರುವ ತೊಟ್ಟುಗಳಿಗೂ ಹಸಲಿ ಕಾಯಿಗಳು ಎಳೆತಾಗಿರುವಾಗಲೇ ಉದುರಿಹೋಗುವಂತೆ ಮಾಡುತ್ತದೆ. ಅನೇಕ ವೇಳೆ ಕೇಡು ಇಷ್ಟಕ್ಕೇ ನಿಲ್ಲುವುದಿಲ್ಲ. ಹೂವಿನ ತೊಟ್ಟು ಎಲ್ಲಾದಕ್ಕಿಂತ ಕೆಳಗಿನ ಗರಿಯ ಬುಡದಿಂದ ಹುಟ್ಟುವುದರಿಂದ ಮರದ ತಲೆಯಲ್ಲಿ ಹಸರಾಗಿ ಉಬ್ಬಿಕೊಂಡಿರುವ ಭಾಗದ ಅಥವಾ ತೂಬೆಯ ಬುತಕ್ಕೆ ನೆಟ್ಟಗೆ ಹೋಗುತ್ತದೆ. ಈ ಹಸುರಾದ ಭಾಗದಲ್ಲಿರುವ ಹಾಳೆಗಳು ಅಥವಾ ಪಟ್ಟೆಗಳು ಬೆಳೆಯುವ ಸುಳಿಯನ್ನು ಸುತ್ತಲೂ ಮುಚ್ಚಿಕೊಂಡು ಕಾಪಾಡುವ ಹೊದಿಕೆಯಾಗಿವೆ. ಈ ಪಟ್ಟೆಗಳ ಪೈಕಿ ಎಲ್ಲಾದಕ್ಕಿಂತ ಕೆಳಗಿರುವ ಪಟ್ಟೆಗೆ ಹೂವಿನ ತೊಟ್ಟು ಅಥವಾ ಹೊಂಬಾಳಿ ಹುಟ್ಟುವ ಸ್ಥಳದ ಹತ್ತಿರ ಜಾಡ್ಯ ತಗುಲಿ ಅಲ್ಲಿ ರೋಗದ ಮಚ್ಚೆಯು ಕಾಣಿಸಿಕೊಳ್ಳುತ್ತದೆ. ಆಗ ಅದರ ಒಳಗಿರುವ ಪಟ್ಟೆಗಳಿಗೂ ಜಾಡ್ಯ ತಗುಲಿ ಒಳಗಿನ ಭಾಗಗಳು ಮೇಲಿನ ಭಾಗಕ್ಕಿಂತ ವ್ಯದುತರವಾಗಿರುವುದರಿಂದ ರೋಗವು ಹರಡಿಕೊಂಡು ಸುಳಿಗೂ ತ್ವರೆಯಾಗಿ ವ್ಯಾಪಿಸುತ್ತದೆ. ಸುಳಿಗೆ ರೋಗ ತಗುಲಿದ ಕೂಡಲೇ ಅದು ನಾಶವಾಗಿ ಮರದ ತಲೆಯಲ್ಲಾ ಬಾಡಿ ಬಿದ್ದುಹೋಗುತ್ತದೆ. ಮರದ ಬೆಳೆ ಮಾತ್ರ ಹೋಗುವುದಲ್ಲದೆ ಮರವೆಲ್ಲಾ ಸಾಯುವುದರಿಂದ ರೋಗ ತಗುಲಿದ ಪ್ರಾಂತ್ಯಗಳಲ್ಲಿ ಬಹಳ ನಷ್ಟ ಉಂಟಾಗುತ್ತದೆ.

ಪಟ್ಟೆಗಳ ಅಥವಾ ಹಾಳೆಗಳ ರೋಗದ ಮಚ್ಚೆಗಳಲ್ಲಿಯೂ ಬಾಡಿಹೋದ ಕಾಯಿನ ತೊಟ್ಟುಗಳಲ್ಲಿಯೂ ಫೈತಾಫ್ತೋರಾ ಎಂಬ ಜಾತಿಯ ಮಿಸಿ ಯಾ ವಿಷ ಸನ್ಯಾಣುವು ಇರುತ್ತದೆ. ಇದೇ ರೋಗಕ್ಕೆ ಕಾರಣವೆಂಬುವುದಕ್ಕೆ ಸಂದೇಹವಿಲ್ಲ. ಕೆಲವು ಜಾತಿ ದುಷಾಗಿರುವ ಫೈತಾಫ್ತೋರಾ ಎ ಖುವಲ್ಲಪ್ತೋ ಕೆಟ್ಟ ಅಣುಬಂದಣಿಕೆ [= ಬದನಿಕೆ, ಬರಿಸಿಕೆ, ಬಂದಳಿಕೆ, ಬಂದಾರಿಕೆ, ಬಾಂದುರಿಕೆ, ಬಂದರಿಗೆ, ವನ್ದಾಕೆ, (ಸಂಸ್ಕೃತ ಜೀವಂತಿಕೆ, ವೃಕ್ಷಾರುಹೆ, ವಂದೆ, ವೃಕ್ಷಾವಿನಿ,)] ಗಳಾಗಿವೆ. ಉರಳಗಡ್ಡೆಯ ಜಾಡ್ಯಕ್ಕೆ ಕಾರಣವಾಗಿರುವ ಪ್ರಸಿದ್ಧವಾದ ಫೈತಾಫ್ತೋರಾ ಇಫೆಸ್ಟಾನ್ಸ್ ಎಂಬ ಅಣುಬಂದಣಿಕೆಯನ್ನು ಹೊಣಗಿದ ಸಸ್ಯ ಪದಾರ್ಥಗಳ ಮೇಲೆ ಬೆಳೆಸಿ ಇದ್ದಾಗ್ಯೂ ಅದರ ಬೆಳವಣಿಗೆಯು ಖಡಕಿರುವ ಸಸ್ಯ ಪದಾರ್ಥದ ಮೇಲೆ ಇದ್ದಷ್ಟು ಪ್ರಬಲವಾಗಿ ಇರುವುದಿಲ್ಲ. ಅಡಕೆಯ ಮರದ ಫೈತಾಫ್ತೋರಾ ಎಂಬ ವಿಷದ ಅಣುಬಂದಣಿಕೆಯು ಅದರ ಸ್ಥಾನದಿಂದಲೂ ಅದರ ಸಂವಿಧಾನದ ಗುಣದಿಂದಲೂ ಅದು ಉತ್ಪತ್ತಿ ಮಾಡುವ ಅಪರಿವರ್ತವಾದ ಬೀಜಗಳಿಂದಲೂ ಜರುರಾದ ಅಣುಬಂದಣಿಕೆಯಾಗಿ ತೋರುತ್ತದೆ.

ಈ ಮಿಸಿಯಲ್ಲಿ ಅಣುಮಿಸಿ ಅಥವಾ ಅಡಕೆ ಮರದ ಮೈಯೆಲ್ಲಿ ಬೆಳೆದು ಮೇಲ್ಭಾಗಕ್ಕೆ ವಿಸ್ತರಿಸಿಕೊಳ್ಳುವ ಬಂದು ಭಾಗವೂ ಆ ಅಣುಮಿಸಿಯ ಮೇಲ್ಭಾಗದ ಪರೆಗಳಲ್ಲಿ ಮಾತ್ರವೇ ಉಂಟಾಗುವ ಮುಂದಕ್ಕೆ ಬೀಜಗಳನ್ನು ಹುಟ್ಟಿಸುವ ಅಣುಬೀಜ ಕೋಶಗಳುಳ್ಳ ಮತ್ತೊಂದು ಭಾಗವೂ ಇವೆ. ಈ ಒಳ ಭಾಗದಲ್ಲಿ ಅಣುಕೋಶಗಳ ನಡುವೆ ಬಣ್ಣವಿಲ್ಲದ ದಾರದಹಾಗಿರುವ ವಸ್ತುಗಳು ಇವೆ ಅಲ್ಲಲ್ಲಿ ಈ ಪರೆಗಳು ಗಿಡದ ಹೊರಭಾಗವನ್ನು ಸೇರಿ ಕವಲುಗಳುಳ್ಳ ಸಣ್ಣದಾರಗಳಹಾಗೆ ಬೆಳೆಯುತ್ತವೆ. ಇವುಗಳ ಕೊನೆಗಳಲ್ಲಿಯೂ ಮತ್ತು ಪಾರ್ಶ್ವದಿಂದ ಹೊರಟ ಸಣ್ಣ ತೊಟ್ಟುಗಳಮೇಲೂ ಅಣುಬೀಜ ಕೋಶಗಳು ಹುಟ್ಟುತ್ತವೆ. ಅವು ಪೇರ್ ಯಾ ಬೀರಿಹಣ್ಣಿನ ಅಥವಾ ಬುಗರಿಯ ಆಕಾರವುಳ್ಳವುಗಳಾಗಿವೆ. ಅವುಗಳು ಅವುಗಳ ಅಗಲವಾದ ಕೊನೆಯಲ್ಲಿ ತೊಟ್ಟಿಗೆ ಅಂಟಿಕೊಂಡಿದ್ದು ಅದರಿಂದ ಸುಲಭವಾಗಿ ಬಿದ್ದುಹೋಗುತ್ತವೆ. ಅವು ನೀರಿನಲ್ಲಿ ತ್ವರೆಯಾಗಿ ಮೊಳೆತು ಬಂದೊಂದೂ ಹನ್ನೆರಡು ಅಥವಾ ಅಧಿಕವಾದ ನೀರಿನಲ್ಲಿ ಈಜುವ ಅಣುಬೀಜಗಳನ್ನು ಹುಟ್ಟಿಸುತ್ತವೆ. ಇವು ನಾನಾ ದಿಕ್ಕುಗಳಲ್ಲಿಯೂ ಈಜಿ ಸ್ವಲ್ಪ ಕಾಲ

ದ ತರುವಾಯ ಬಂದು ಕಡೆ ನಿಂತು ಚೆನ್ನಾಗಿ ಗುಂಡುತಿರಿಗಿ ಪುನಃ ಬಂದು ದಾರವನ್ನು ಹುಟ್ಟಿಸುವುದರ ಮೂಲಕ ತಿರಿಗಿ ಮೊಳೆಯುತ್ತವೆ. ಈ ಅಣುಬೀಜ ಕೋಶಗಳ ಮತ್ತು ಅಣುಬೀಜಗಳ ಮೂಲಕವಾಗಿಯೇ ರೋಗವು ಹರಡಿಕೊಳ್ಳುತ್ತದೆ.

ಈ ಫೈತಾಫ್ತೋರಾ ಅಣುಬೀಜ ಕೋಶಗಳು ಸರಿಯಾಗಿ ಮೊಳೆಯುವುದಕ್ಕೆ ಅವು ನೀರಿನಲ್ಲಿ ಬೀಳಬೇಕಾಗಿರುವುದರಿಂದ ಪ್ರಾಯಃ ಅವುಗಳಿಂದ ಉಂಟಾಗುವ ರೋಗಗಳೆಲ್ಲಾ ತೇವದ ಮತ್ತು ಮಳೆಯ ಸ್ಥಿತಿಗಳನ್ನು ಬಹಳವಾಗಿ ಪ್ರಶ್ರಯಿಸುವ ಇವೆ. ಹೂವಿನಲ್ಲಿಯೂ ಕಾಯಿನ ತೊಟ್ಟುಗಳಲ್ಲಿಯೂ ಆರಂಭಿಸುವ ಹಾಗೆ ತೋರುವ ಅಡಕೆ ಮರದ ರೋಗವು ಹರಡಿಕೊಳ್ಳುವುದಕ್ಕೆ, ಕಾಯಿ ಬಿಡುವ ಕಾಲದಲ್ಲಿ ತೇವದ ಸ್ಥಿತಿಯು ಅನುಕೂಲವಾಗಿರುವುದು ಅವಶ್ಯವಾಗಿದೆ. ಮೈಸೂರು ಸೀಮೆಯ ಈ ಭಾಗಗಳಲ್ಲಿ ಭಾರಿ ಮಳೆಗಳು ಜೂನ್ ತಿಂಗಳಲ್ಲಿ ಪ್ರಾರಂಭವಾಗಿ ಆಗಸ್ಟ್ ಅಥವಾ ಸಪ್ಟಂಬರು ಕೊನೆಯ ವರಗೂ ನಡೆಯುತ್ತವೆ. ಈ ಕಳಗಿನ ಮಾತುಗಳು ಈಚಿನ ವರ್ಷಗಳಲ್ಲಿ ರೋಗದ ಪ್ರಾಬಲ್ಯವು ಹೆಚ್ಚಿನದನ್ನೂ ಅದು ಬಂದೇ ಪ್ರದೇಶಕ್ಕೆ ಮಾತ್ರ ತಗುಲಿಕೊಂಡಿರುವುದನ್ನೂ ವಿವರಿಸಬಹುದು.

ಮೂವತ್ತು ನಲವತ್ತು ವರ್ಷಗಳ ಹಿಂದೆ ರೋಗವು ಮೊದಲು ಸಲ ಕಾಣಿಸಿಕೊಂಡಾಗ ನವೆಂಬರು ಅಥವಾ ಡಿಸೆಂಬರು ತಿಂಗಳಲ್ಲಿ ಕಾಯಿಗಳನ್ನು ಕೊಯ್ಯುವ ಪದ್ಧತಿಯಿತ್ತು. ಈಚಿನ ಇಪ್ಪತ್ತು ವರ್ಷಗಳಿಂದ ಕೊಯ್ಲಿಗೆ ಇನ್ನೂ ಮುಂಚೆಯೇ ಎಂದರೆ ಕೆಲವು ವೇಳೆಗಳಲ್ಲಿ ಜುಲೈ ಅಥವಾ ಆಗಸ್ಟಿನಷ್ಟು ಹೊತ್ತಿಗೆ ಆಗುತ್ತದೆ. ಇದರಿಂದ ಬೇರೆ ಪ್ರಕಾರವಾಗಿ ವ್ಯಾಪಾರವಾಯ ಮಾಡುವುದರಿಂದ ಅಥವಾ ಮುಂದಾಗಿ ಫಲ ಬರುವಂಥಾ ಜಾತಿಯ ಮರವನ್ನು ತಂದು ಹಾಕಿರುವುದರಿಂದ ಇದರ ಪ್ರಕೃತಿಯು ಬದಲಾಯಿಸಿದಂತೆ ಕಾಣುತ್ತದೆ. ಈ ಕಾರಣದಿಂದ ತೇವದ ಸ್ಥಿತಿಯು ರೋಗ ಪ್ರಬಲಿಸುವುದಕ್ಕೆ ಅನುಕೂಲವಾಗಿರುವ ಕಾಲದಲ್ಲಿ ಕಾಯಿಗಳ ತೊಪ್ಪೆಗಳು ರೋಗ ತಗುಲುವು ಕೆ ಗುರಿಯಾಗುತ್ತವೆ. ಕೆಲವು ತೋಟಗಳಲ್ಲಿ ಈಗಲೂ ಡಿಸೆಂಬರ್ ತಿಂಗಳಲ್ಲಿ ಪೈರು ಕಟುವಾಗುವುದರಿಂದ ಅಲ್ಲಿ ಈ ರೋಗದಿಂದ ನಷ್ಟ ಉಂಟಾಗಿಲ್ಲವೆಂದು ತಿಳಿಯುವುದಿದೆ. ಡಿಸೆಂಬರು ಮತ್ತು ಜನವರಿ ತಿಂಗಳಲ್ಲಿ ಪೈರು ಕೊಯ್ಯಲಾಗುವ ಮೈಸೂರು ಸೀಮೆಯ ಮೂಡಗೆರೆ ಮತ್ತು ಅದರ ಸರಿಹೊರೆಯ ಪ್ರದೇಶಗಳಲ್ಲಿ ಜಾಸ್ತಿ ಹಿಡಿದಿರುವುದಿಲ್ಲ. ಹಾಗೆಯೇ ಎತ್ತರದ ಸಮುದ್ರ ಪಟ್ಟದಲ್ಲಿರುವ ಪ್ರದೇಶಗಳಲ್ಲಿ ಬಹಳ ಭಾರಿ ಸುಳಿ ಬಿದ್ದಾಗ್ಯೂ ಅನೇಕ ಸ್ಥಳಗಳಲ್ಲಿ ಕೊಪ್ಪರಿಗೆಯಲ್ಲಿ ಕೊಯ್ಯಲಾದನಂತರ ಪೈರು ಕೊಯ್ಯಲಾಗುವ ವರೆಗೂ ಜಾಸ್ತಿ ಕಾಣಿಸಿಕೊಂಡಂತೆ ತಿಳಿಯಬಂದಿಲ್ಲ. ಅಡಕೆಯನ್ನು ಪಕ್ವವಾಗುವ ಅಥವಾ ಹಣ್ಣಕ್ಕೆ ಬರುವ ಕಾಲದಲ್ಲಿ ಮಳೆ ಬೀಳುವುದರ ದುರ್ಗುಣಗಳು ವ್ಯವಸಾಯಗಾರರಿಗೇ ತಿಳಿದಿವೆ. ಕೊಪ್ಪರಿಗೆಯಲ್ಲಿ ಮಳೆಯಿಂದ ಅಡಕೆ ಗೊನೆಗಳನ್ನು ಕಾಪಾಡುವುದಕ್ಕೆ ಒಂದು ವಿಶೇಷವಾದ ಉಪಾಯವನ್ನು ಕಲ್ಪಿಸಿ ಇದಾರೆ. ಮಳೆ ಪ್ರಾರಂಭಿಸುವುದಕ್ಕೆ ಮುಂಚೆ ಪ್ರತಿ ಗೊನೆಯನ್ನೂ ಎಲೆಗಳಿಂದ ಅಥವಾ ಅಡಕೆ ಮರದ ಹೊಂಬಾಳೆ ಪಟ್ಟೆಯಿಂದ ಅಥವಾ ಹಾಳೆಯಿಂದ ಮಾಡಿದ ಬಂದು ಹೊದಿಕೆಯಿಂದ ಮುಚ್ಚುತ್ತಾರೆ (ಅಥವಾ ಕೊಪ್ಪೆಕಟ್ಟುತ್ತಾರೆ). ಈ ಪದ್ಧತಿಯಿಂದ ಬಹಳ ಪ್ರಯೋಜನವುಂಟಾಗುವಂತೆ ತಿಳಿಯಬಂದಿದೆ.

ಈ ರೋಗವು ಹರಡಿಕೊಳ್ಳದಂತೆ ಅಡ್ಡಿಮಾಡುವುದಕ್ಕೆ ಪ್ರಯತ್ನಿಸುವದರಲ್ಲಿ ಎರಡು ವಿಷಯಗಳನ್ನೆತ್ತಿ ಲಕ್ಷ್ಯದಲ್ಲಿ ಇಡಬೇಕು. ಮೊದಲನೆಯದು ಸಾಧ್ಯವಾದಲ್ಲಿ ಹಿಂದಿನ ವರ್ಷಗಳಲ್ಲಿ ಮಾಡುತ್ತಿದ್ದಂತೆ ಕಡಿತವಾಗಿ ಕಟಾವುಮಾಡುವ ಪದ್ಧತಿಯನ್ನು ಪುನಃ ಅನುಸರಿಸುವುದು. ಅಡಕೆ ತೋಟಗಳಲ್ಲಿ ಈಗ ಉಪಯೋಗದಲ್ಲಿರುವ ವ್ಯವಸಾಯದ ವಿಧಾನಗಳನ್ನು ಬದಲಾಯಿಸುವುದರಿಂದ ಹೀಗೆ ಮಾಡಲು ಸಾಧ್ಯವಾಗಬಹುದು. ಇದು ಸಾಧ್ಯವೇ ಎಂದು ತಿಳಿದುಕೊಳ್ಳಲು ಪುಕ್ಕಾಗಿ ನಮ್ಮ ಕೈಯಲ್ಲಿ ಆದುದಕ್ಕಿಂತ ಬಹಳ ಹೆಚ್ಚು ವಿಚಾರಣೆಯು ಅವಶ್ಯವಾಗಿದೆ. ಈಗ ಅನೇಕ ಸ್ಥಳಗಳಲ್ಲಿ ಅಡಕೆ ಮರಗಳಿಗೆ ಆರು ಅಂಗುಲ ಆಳದ ಜಿಗಳು ಅಥವಾ ಹೊಸದು ಅದಕ್ಕೆ ಬದಲಿನ ಗೊಬ್ಬರವನ್ನೆತ್ತಿ ಹಾಕಿ ಮರಗಳ ಬುಡದ ಸುತ್ತಲೂ ಅರ್ಧ ಕೊಳೆತುಹೋದ ಎಲೆಗಳು ಹೊಸವನ್ನು ಮುಂತಾದುವನ್ನು ಹಾಕುತ್ತಾರೆ. ಫಲಲಾಭವಾದರಿಂದ ಫಲ ಬಿಡುವಂತೆ ಮಾಡುವುದಕ್ಕೆ ಈ ವ್ಯವಸಾಯವನ್ನು ಕಡಮೆ ಮಾಡುವುದರಿಂದ ಪೈರಾಗುವುದು ತಡವಾಗಬಹುದು. ಈ ಅಂಶವನ್ನೂ ರೋಗ ಹರಡಿಕೊಳ್ಳದಂತೆ ಅಡ್ಡಿಮಾಡುವುದಕ್ಕೆ ನಿಜವಾಗಿ ಎಷ್ಟರಮಟ್ಟಿಗೆ ಅದು ಫಲಕಾರಿಯಾಗುವುದೆಂಬುವುದನ್ನೂ ನಿಶ್ಚಯಿಸುವುದಕ್ಕೆ ಪರೀಕ್ಷೆಗಳು ಅವಶ್ಯವಾಗಿವೆ. ತಡವಾಗಿ ಫಲಬಿಡುವ ಜಾತಿಯ ಅಡಕೆ ಮರಗಳು ಯಾವುವಾದರೂ ಇವೆಯೇ ಎಂದೂ ಕೂಡ ಹುಡುಕಬೇಕು.

ಗೊನೆಗಳಿಗೆ ಮುಚ್ಚುವುದಕ್ಕಾಗಿ ಉಪಯೋಗಿಸುವ ಹೊದಿಕೆಗಳನ್ನು ಅಥವಾ ಕೊಪ್ಪೆಗಳನ್ನು ಅಭಿವೃದ್ಧಿಪಡಿಸುವುದು ಜಾಸ್ತಿ ಬಾರದಂತೆ ಅಡ್ಡಿಮಾಡುವುದಕ್ಕೆ ಮತ್ತೊಂದು ವಿಶೇಷ ಕಾರ್ಯಸಾಧಕವಾದ ವಿಧಾನವಾಗಿದೆ. ಈಗ ಉಪಯೋಗದಲ್ಲಿರುವ ಹೊದಿಕೆಗಳು ಮುಚ್ಚಳಗಳು ಯಾ ಕೊಪ್ಪೆಗಳು ತೃಪ್ತಿಕರವಾಗಿಲ್ಲ. ಅವು ಬಿಸಿಲುಕಾಯುವಾಗ ಒಣಗಿ ಬಿರುಕುಬಿಟ್ಟು, ಮಳೆ ಒಂದೇ ಸಮನಾಗಿ ಬಹಳಕಾಲ ಹಿಡಿದುಕೊಂಡಾಗ ಕೊಳೆತುಹೋಗಿ ತುಂಡುತುಂಡಾಗಿ ಬಿದ್ದುಹೋಗುತ್ತವೆ. ಮಳೆ ಪ್ರಾರಂಭವಾದಕೂಡಲೆ ಅವುಗಳನ್ನು ಗೊನೆಗಳ ಮೇಲೆ ಕಟ್ಟುವುದರಿಂದ ಉಂಟಾಗುವ ನೆರಳಿನಿಂದ ಏನೂ ಕೆಡಕು ಉಂಟಾಗುವಹಾಗೆ ತೋರಲಿಲ್ಲ. ಹೊದಿಕೆಗಳೇ ಇಲ್ಲವೆ ಇರುವುದಕ್ಕಿಂತ ಒಡಕಾಗಿ ಸೋರುವ ಹೊದಿಕೆ (ಅಥವಾ ಕೊಪ್ಪೆ) ಗಳಿಂದ ಕೇಡು ಇನ್ನೂ ಹೆಚ್ಚಾಗಬಹುದು. ಏತಕ್ಕೆಂದರೆ ಅವು ತೇವ ಆರುವುದಕ್ಕೂ ಗಾಳಿಯಾಡುವುದಕ್ಕೂ ಅಡ್ಡಿಯಾಗಿ ಮಿಸಿಯು ಬೆಳೆಯುವುದಕ್ಕೆ ಅನುಕೂಲವಾಗುವಂತೆ ಗೊನೆಗಳನ್ನು ಸುತ್ತಲೂ ತೇವದಗಾಳಿ ಇರುವಂತೆ ಮಾಡುತ್ತವೆ. ತಗರದ ತಗಡಿನಿಂದ ಮಾಡಿದ ಹೊದಿಕೆಗಳನ್ನು (ಅಥವಾ ಕೊಪ್ಪೆಗಳನ್ನು) ಉಪಯೋಗಿಸುವುದು ಒಳ್ಳೆ ಸ್ಥಿತಿಯಲ್ಲಿರುವ ತೋಟಗಾರರ ಶಕ್ತಿಗೆ ಮೀರಿ ಇರಲಾರದು. ಮತ್ತು ಈ ತಗರದ ಹೊದಿಕೆಗಳು ಅಡಕೆಹಾಳೆಯಿಂದ ಮಾಡಿದವುಗಳಿಗಿಂತ ಬಹಳ ಹೆಚ್ಚಾಗಿ ಕಾರ್ಯಸಾಧಕವಾದುವುಗಳಾಗಿರುವವು. ಕೊಪ್ಪದ ಒಬ್ಬ ವಿದ್ಯಾವಂತನಾದ ದೇಶೀಯನು ಸತ್ಕದ ಮುಚ್ಚಳ ಅಥವಾ ಕೊಪ್ಪೆಗಳನ್ನು ಮುಚ್ಚಿ ತಾನು ಪರೀಕ್ಷೆಮಾಡಿ ನೋಡಿದ್ದರಲ್ಲಿ ಬಹಳ ಒಳ್ಳೆಯದಾಗಿ ಕಂಡುಬಂತೆಂದೂ ಹಾಗೆ ಮುಚ್ಚಿದ ಕಾಯಿಗಳು ಚೆನ್ನಾಗಿ ಇದ್ದವೆಂದೂ ಮುಚ್ಚದೆ ಇದ್ದವು ಕೊಳೆತುಹೋದುವೆಂದೂ ನಮಗೆ ತಿಳಿಸಿದನು. ತಗರದ ಮುಚ್ಚಳಗಳು ಅಥವಾ ಕೊಪ್ಪೆಗಳು ಕೆಲವು ವರ್ಷಗಳು ನಿಲ್ಲುತ್ತವೆ ವತ್ತು ಸಾಕಾದಷ್ಟು ಬಹಳವಾಗಿ ಮುಚ್ಚಳಗಳನ್ನು ತಯಾರಾಡಿಸಿದರೆ ಅವುಗಳ ಬೆಲೆಯು ಸಾಧಾರಣವಾದ ಅಡಕೆ ತೋಟಗಾರನ ಶಕ್ತಿಗೆ ಮೀರಲಾರದು, ಮತ್ತು ಬಹುಶಃ ಅವುಗಳ ಬೆಲೆಯು ಒಂದೇ ವರ್ಷದಲ್ಲಿ ಹುಟ್ಟಬಹುದು. ರೋಗ ತಗುಲಿವ ಪ್ರದೇಶಗಳಲ್ಲಿ ಎಲೆಯ (ಅಥವಾ ಹಾಳೆಯ) ಹೊದಿಕೆಗಳಿಗೆ (ಅಥವಾ ಕೊಪ್ಪೆಗಳಿಗೆ) ಬದಲಾಗಿ ತಗರದವುಗಳನ್ನು ಉಪಯೋಗಕ್ಕೆ ತರಲು ಪ್ರಯತ್ನಮಾಡಿದರೆ ಪ್ರಯೋಜನವುಂಟಾದೀತು.

Govt. Press, Bangalore—1907